**ಕರ್ನಾಟಕ ಸರ್ಕಾರ**

**ಸಹಕಾರ ಇಲಾಖೆ**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಅಸ್ಕರ್ ರಸ್ತೆ, ಬೆಂಗಳೂರು-56.**

ಸಂಖ್ಯೆ.ಆರ್‌ಸಿಎಸ್/ಎಕ್ಸ್‌ಎಂಸಿ/ದಾವಾಶುಲ್ಕ/160/2017-18 ದಿನಾಂಕ: ೦೬-2-2018

ವಿಷಯ: ಕರ್ನಾಟಕ ಸೌಹಾರ್ದ 1997 ರ ಪ್ರಕರಣ 43 (ಎ) ನಲ್ಲಿ ಸಹಕಾರಿ ಇತ್ಯರ್ಥಕ್ಕೆ ಸಲ್ಲಿಸಿರುವ ವ್ಯಾಜ್ಯ ಪ್ರಕರಣಗಳು ಹಾಗೂ ಅವುಗಳನ್ನು ಜಾರಿಗೊಳಿಸಲು ಸಲ್ಲಿಸುವ ಅರ್ಜಿಗಳಿಗೆ ಶುಲ್ಕವನ್ನು ನಿಗಧಿಪಡಿಸುವ ಬಗ್ಗೆ

ಉಲ್ಲೇಖ: ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಆರ್‌ಸಿಎಸ್/ಆರ್‌ಎಸ್‌ಆರ್/ಡಿಎಂಸಿಡಿ-8/04/2003-04, ದಿ:03-05-2017.

<><><>

## ಆದೇಶ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 43(ಎ) ರಡಿಯಲ್ಲಿ ದಾವೆಗಳನ್ನು ದಾಖಲಿಸಲು ಅವಕಾಶವಿದೆ. ಈ ರೀತಿ ದಾಖಲಿಸಲಾದ ದಾವೆಗಳಲ್ಲಿ ಪಡೆದ ಐತೀರ್ಪನ್ನು ಅನುಷ್ಠಾನಗೊಳಿಸಲು ಅಮಲ್ಜಾರಿ ಕ್ರಮಕೈಗೊಳ್ಳಲು ಸಹ ಅವಕಾಶವಿದೆ. ಅಂತಹ ದಾವಾ ಪ್ರಕರಣಗಳು ಮತ್ತು ಅಮಲ್ಜಾರಿ ಅರ್ಜಿಗಳ ಸಲ್ಲಿಕೆ ಸಂಬಂಧದಲ್ಲಿ ಶುಲ್ಕ ನಿಗದಿಗೊಳಿಸುವ ಅಧಿಕಾರ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 43ಎ ರಲ್ಲಿ ನಿಬಂಧಕರಿಗೆ ದತ್ತವಾಗಿದೆ. ಈ ಅವಕಾಶದ ಅಧಿಕಾರವನ್ನು ಉಪಯೋಗಿಸಿಕೊಂಡು ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ದಾವಾ ಶುಲ್ಕ ಮತ್ತು ಅಮಲ್ಜಾರಿ ಶುಲ್ಕವನ್ನು ಕೆಳಕಂಡಂತೆ ನಿಗದಿಪಡಿಸಿದೆ.

**ಅಧಿಬಾರ ಪ್ರಕರಣ/ ದಾವಾ ಪ್ರಕರಣ ಶುಲ್ಕ- (ಹಣಕಾಸಿನ ವ್ಯಾಜ್ಯಗಳು)**

| ಕ್ರ.ಸಂ. | ದಾವಾ ಮೊತ್ತ ಐತೀರ್ಪು ಕೋರಿರುವ ಮೊತ್ತ | ಪಾವತಿಸಬೇಕಾದ ಶುಲ್ಕ ಶೇ (ಐತೀರ್ಪಿನ ಮೊತ್ತದ ಮೇಲೆ |
|---|---|---|
| 1 | ರೂ.10,000-00 ರ ವರೆವಿಗೂ | 9% |
| 2 | ರೂ.10,000-00 ರಿಂದ 25,000-00 | 5% |
| 3 | ರೂ.25,001-00 ರಿಂದ 50,000-00 | 3% |
| 4 | ರೂ.50,001-00 ರಿಂದ 1.00 ಲಕ್ಷದ ವರೆಗೂ | 2% |
| 5 | ರೂ. 1.00 ಲಕ್ಷದಿಂದ 2.00 ಲಕ್ಷದವರೆಗೂ | 1.5% |
| 6 | ರೂ. 2.00 ಲಕ್ಷದಿಂದ 5.00 ಲಕ್ಷದವರೆಗೂ | 1% |
| 7 | ರೂ. 5.00 ಲಕ್ಷದಿಂದ ಅದಕ್ಕಿಂತ ಮೇಲ್ಪಟ್ಟು | 0.75% |

-೨-

**ಹಣಕಾಸೇತರ ದಾವಾ-(ನಾನ್ ಮಾನಿಟರಿ ಡಿಸ್‌ಪ್ಯೂಟ್ಸ್) [ಪ್ರಕರಣ 69. 70. 103 ಮತ್ತು 106]**

| ಕ್ರ.ಸಂ. | ಸಂಘದ ಕಾರ್ಯವ್ಯಾಪ್ತಿ | ಪಾವತಿಸಬೇಕಾದ ಶುಲ್ಕ ಪ್ರಕರಣ ರೂ. |
|---|---|---|
| 1 | ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಮತ್ತು ತಾಲ್ಲೂಕು | 800=00 |
| 2 | ತಾಲ್ಲೂಕು ಮಟ್ಟಕ್ಕಿಂತ ಹೆಚ್ಚು ಜಿಲ್ಲಾ ಮಟ್ಟ ಸೇರಿ | 1000-00 |
| 3 | ಜಿಲ್ಲಾ ಮಟ್ಟಕ್ಕಿಂತ ಹೆಚ್ಚು ಪ್ರಾಂತ್ಯ ಮಟ್ಟದ ವರೆವಿಗೆ | 1500-00 |
| 4 | ಪ್ರಾಂತ್ಯ ಮಟ್ಟಕ್ಕಿಂತ ಹೆಚ್ಚು ರಾಜ್ಯ ಮಟ್ಟದ ವರೆಗೆ | 2000-00 |

**ಅಮಲ್ಜಾರಿ ಶುಲ್ಕ**

| ಕ್ರ.ಸಂ. | ಐತೀರ್ಪು ಮೊತ್ತ | ಪಾವತಿಸಬೇಕಾದ ಶುಲ್ಕ % [ಐತೀರ್ಪಿನ ಮೊತ್ತದ ಮೇಲೆ] |
|---|---|---|
| 1 | ರೂ.25,000 ದವರೆಗೆ | 6% |
| 2 | ರೂ.25,000-ರೂ.50.000 | 5% |
| 3 | ರೂ.50,000-ರೂ.1.00 ಲಕ್ಷ | 4% |
| 4 | ರೂ.1.00-ರೂ.2.00 ಲಕ್ಷ | 3% |
| 5 | ರೂ.2.00 ಲಕ್ಷ ಮತ್ತು ಮೇಲ್ಪಟ್ಟು | 2% |

1) **ಸಾದಿಲ್ವಾರು ವೆಚ್ಚ:-**

ಪ್ರತಿ ದಾವಾ ಪ್ರಕರಣದಲ್ಲಿ ರೂಪಾಯಿ 150 ಸಾದಿಲ್ವಾರು ವೆಚ್ಚವೆಂದು, ಒಬ್ಬರಿಗಿಂತ ಹೆಚ್ಚಿನ ವಾದಿ/ಪ್ರತಿವಾದಿಗಳಿಗೆ ರೂ. 50/-ರಂತೆ ಪಾವತಿಸತಕ್ಕದ್ದು. ಗೌರವ ಮಧ್ಯಸ್ಥದಾರರು ಇತ್ಯರ್ಥಪಡಿಸುವ ಪ್ರತಿ ಪ್ರಕರಣದಲ್ಲಿಯೂ ನಿಗದಿಪಡಿಸಿದ ಪಂಚಾಯ್ತಿ ದಾವಾ ಶುಲ್ಕದ ಶೇ 75ರ ಭಾಗವನ್ನು (3/4) ಪಾವತಿಸತಕ್ಕದ್ದು. ಉಳಿದ ಭಾಗವನ್ನು ಲೆಕ್ಕಶೀರ್ಷಿಕೆ : 0425-Co-Operation(ಸಹಕಾರ) ಖಾತೆಗೆ ಜಮಾಮಾಡತಕ್ಕದ್ದು. ಪ್ರತಿ ಪ್ರಕರಣ ಒಂದಕ್ಕೆ ಅರ್ಜಿದಾರರು ಪಾವತಿಸುವ ಸಾಧಿಲ್ವಾರು ವೆಚ್ಚ ರೂಪಾಯಿ 150 ಮತ್ತು ಒಬ್ಬರಿಗಿಂತಲೂ ಹೆಚ್ಚು ಅರ್ಜಿದಾರರಿದ್ದಲ್ಲಿ ಪ್ರತಿ ಅರ್ಜಿದಾರರಿಗೆ ತಲಾ ರೂ.30/- ಅನ್ನು ಸಾದಿಲ್ವಾರು ವೆಚ್ಚವಾಗಿ ಗೌರವ ಮಧ್ಯಸ್ಥದಾರರಿಗೆ ಪಾವತಿಸತಕ್ಕದ್ದು.

ರೂ.3 ಲಕ್ಷಕ್ಕಿಂತ (ಮೂರು ಲಕ್ಷಕ್ಕಿಂತ) ಹೆಚ್ಚಿನ ಮೊತ್ತದ ದಾವೆಗಳನ್ನು ಇಲಾಖಾಧಿಕಾರಿಗಳೇ ಇತ್ಯರ್ಥಪಡಿಸುವುದು. ರೂ. 3 ಲಕ್ಷಕ್ಕಿಂತ (ಮೂರು ಲಕ್ಷಕ್ಕಿಂತ) ಹೆಚ್ಚಿನ ಮೊತ್ತದ ದಾವಾ ಪ್ರಕರಣಗಳನ್ನು ಗೌರವ ಮಧ್ಯಸ್ಥದಾರರಿಗೆ ವಹಿಸತಕ್ಕದಲ್ಲ.

-3-

ಸರ್ಕಾರಿ ಅಧಿಕಾರಿಗಳು ತೀರ್ಮಾನಿಸಿದ ಪ್ರಕರಣಗಳಲ್ಲಿ ಶುಲ್ಕ ಸೇರಿದಂತೆ ಸಾದಿಲ್ವಾರು ವೆಚ್ಚದ ಪೂರ್ಣ ಹಣವನ್ನು ಸರ್ಕಾರಕ್ಕೆ(ಮೇಲಿನ ಖಾತೆಗೆ) ಪಾವತಿಸತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಪ್ರತಿಯನ್ನು:-

1. ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳು.
2. ರಾಜ್ಯದಲ್ಲಿನ ಎಲ್ಲಾ ಪ್ರಾಂತಗಳ ಸಹಕಾರ ಸಂಘಗಳ ಜಂಟಿ ನಿಬಂಧಕರು/ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು/ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು/ಎಲ್ಲಾ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ರವಾನಿಸಲಾಗಿದೆ. ಅವರು ಅಧಿಸೂಚನೆಯಲ್ಲಿನ ಪರಿಷ್ಕೃತ ಶುಲ್ಕಗಳನ್ನು ಕಟ್ಟುನಿಟ್ಟಾಗಿ ಜಾರಿಗೆತರಕ್ಕದ್ದು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ನಿರ್ಮಾಣ ಭವನ, ಡಾ: ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560 010 ಇವರಿಗೆ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಕ್ಕಾಗಿ ರವಾನಿಸಿದೆ.
4. ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಕ್ಕಾಗಿ ರವಾನಿಸಿದೆ.
5. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಪರ ನಿರ್ದೇಶಕರು ಮತ್ತು ಪದನಿಮಿತ್ತ ಕೈಗಾರಿಕಾ ಸಹಕಾರ ಸಂಘಗಳ ಅಪರ ನಿಬಂಧಕರು, ಬೆಂಗಳೂರು ಇವರಿಗೆ ಮಾಹಿತಿಗಾಗಿ ಮತ್ತು ಅವಶ್ಯ ಕ್ರಮಕೈಗೊಳ್ಳಲು ರವಾನಿಸಿದೆ.
6. ಜವಳಿ ಆಯುಕ್ತರು ಮತ್ತು ಪದನಿಮಿತ್ತ ಸಹಕಾರ ಸಂಘಗಳ ಅಪರ ನಿಬಂಧಕರು, ಬೆಂಗಳೂರು.
7. ಸಹಕಾರ ಸಂಘಗಳ ಜಂಟಿ ನಿಬಂಧಕರು ಮತ್ತು ಪದನಿಮಿತ್ತ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೀನುಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸಂಪಾದಕರು, ಸಹಕಾರ ಪತ್ರಿಕೆ ಬೆಂಗಳೂರು, ಇವರಿಗೆ ರವಾನಿಸುತ್ತಾ ಮುಂಬರುವ ಸಂಚಿಕೆಯಲ್ಲಿ ಈ ಸುತ್ತೋಲೆಯನ್ನು ಪ್ರಕಟಿಸಲು ಕೋರಿ ಕಳುಹಿಸಲಾಗಿದೆ.
9. ಕೇಂದ್ರ ಕಛೇರಿಯಲ್ಲಿನ ಎಲ್ಲಾ ಕೇಂದ್ರ ಸಹಾಯಕರುಗಳಿಗೆ
10. ಇಲಾಖಾ ಜಾಲತಾಣ
11. ಕಛೇರಿ ಕಡತಕ್ಕೆ.